ಆ) ಈ ಕಾಮಗಾರಿಗಳಿಗೆ 1996-97ನೇ ಸಾಲಿನಲ್ಲಿ ರೂ.57.45 ಲಕ್ಷ ಹಾಗೂ 1997-98ನೇ ಸಾಲಿನಲ್ಲಿ ರೂ.0.67 ಲಕ್ಷ ಹಣ ಖರ್ಚು ಮಾಡಲಾಗಿದೆ.

ಇ) ಉದ್ಯೋಗ ಭರವಸೆ ಯೋಜನೆಯಡಿ ತೆಗೆದುಕೊಂಡ ಕಾಮಗಾರಿಗಳ ವಿವರ ಕೆಳಗಿನಂತಿದೆ.

ಕ್ರ. ಸಂ.	ಕಾಮಗಾರಿಗಳು	1996-97			1997-98		
		ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ವೆಚ್ಚ	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ವೆಚ್ಚ
1.	ಒಂದನೇ ಹಂತ ರಸ್ತೆಗಳು ಹಾಗೂ ಸಣ್ಣ ನೀರಾವರಿ ಕೆಲಸಗಳು	9	10.30	10.55			
2.	ಎರಡನೇ ಹಂತ ರಸ್ತೆಗಳು ಹಾಗೂ ಸಣ್ಣ ನೀರಾವರಿ ಕೆಲಸಗಳು	21	28.01	18.90	25	28.50	_
3.	ಪೂರಕ	2	3.50	3.31			
4.	160 ಶಾಲಾ ಕಟ್ಟಡಗಳು	28	23.40	17.64			
5.	428 ಬಾಕಿ ಉಳಿದ ಶಾಲಾ ಕಟ್ಟಡಗಳು	28	25.90	0.984			

ಈ) ಸರ್ಕಾರಿ ಆದೇಶದಲ್ಲಿನ ಮಾರ್ಗಸೂಚಿಯ ಪ್ರಕಾರ ಆಯಾ ಕಾಮಗಾರಿಗಳ ಕಾರ್ಯಗತಗೊಳಿಸಲಾಗುತ್ತದೆ.

ರಾಜ್ಯದಲ್ಲಿರುವ ವೈದ್ಯರಿಲ್ಲದ ಆಸ್ಪತ್ರೆಗಳು

2183 - ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಶಾಸಕರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ವೈದ್ಯರಿಲ್ಲದ ಎಷ್ಟು ಆಸ್ಪತ್ರೆಗಳಿವೆ?

ಆ) ಸದರಿ ಸಮಸ್ಯೆಗೆ ಸರ್ಕಾರದ ಕ್ರಮವೇನು?

ತಾ|| ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 77

ಆ) ಸ್ನಾತಕೋತ್ತರ ವ್ಯಾಸಂಗ ಪೂರೈಸಿ, ಮರುಸ್ಥಳ ನೇಮಕಾತಿ ಕೋರಿ ಬರುವ ವೈದ್ಯರಿಂದ ಈ ಖಾಲಿ ಇರುವ ಹುದ್ದೆ ಭರ್ತಿ ಮಾಡಿ ಈ ಸಮಸ್ಯೆ ಪರಿಹರಿಸಲಾಗುತ್ತಿದೆ. ಅಲ್ಲದೆ ಪ್ರಭಾರ ವ್ಯವಸ್ಥೆ ಮಾಡಿ ಆದಷ್ಟುಮಟ್ಟಿಗೆ ಸಮಸ್ಯೆಯನ್ನು ಬಗೆಹರಿಸಲಾಗುತ್ತಿದೆ.

ರಾಜ್ಯದಲ್ಲಿ ವೃತ್ತಿಪರ ಶಿಕ್ಷಣ

2184 - ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ ಹಾಗೂ ಮುದ್ರಣಾಲಯ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರತಿ ವರ್ಷ ಎಷ್ಟು ಜನಕ್ಕೆ ವೃತ್ತಿಪರ ಶಿಕ್ಷಣವನ್ನು ನೀಡಲಾಗುತ್ತಿದೆ?

ಆ) ಈ ಪೈಕಿ ಶೇಕಡ ಎಷ್ಟು ಭಾಗ ವಿದ್ಯಾರ್ಥಿಗಳು ತಾವು ಕೈಗೊಂಡ ವೃತ್ತಿಪರ ಶಿಕ್ಷಣದ ಲಾಭ ಪಡೆಯುತ್ತಿದ್ದಾರೆ?

ಇ) ವೃತ್ತಿಪರ ಶಿಕ್ಷಣವನ್ನು ಪಡೆದ ವಿದ್ಯಾರ್ಥಿಗಳ ಅನುಕೂಲಕ್ಕೆ ಇರುವ ಸರ್ಕಾರದ ಯೋಜನೆಗಳಾವುವು?

ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ, ವೃತ್ತಿ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ ಹಾಗೂ ಮುದ್ರಣಾಲಯ ಇಲಾಖೆಗಳ ಸಚಿವರು) :

ಅ) ರಾಜ್ಯಕ್ಕೆ ಕೇಂದ್ರ ಪ್ರಾಯೋಜಿತ ವೃತ್ತಿ ಶಿಕ್ಷಣ ಕಾರ್ಯಕ್ರಮದಡಿ 1427 ಕೋರ್ಸುಗಳು ಮಂಜೂರಾಗಿದ್ದು ಪ್ರತಿ ಕೋರ್ಸಿಗೆ 30 ಜನರಂತೆ ಒಟ್ಟು 42810 ವಿದ್ಯಾರ್ಥಿಗಳಿಗೆ ವೃತ್ತಿಪರ ಶಿಕ್ಷಣಕ್ಕೆ ಅವಕಾಶವಿದೆ.

1996-97 ರಲ್ಲಿ ವೃತ್ತಿ ಶಿಕ್ಷಣ ಕೋರ್ಸುಗಳಿಗೆ ದಾಖಲಾದ ವಿದ್ಯಾರ್ಥಿಗಳ ವಿವರ ಈ ಕೆಳಕಂಡಂತಿದೆ :

ಪ್ರಥಮ ವರ್ಷ	:	32,908
ದ್ವಿತೀಯ ವರ್ಷ	:	41,436
ಒಟ್ಟು	:	**74,344**

ಆ) 1996-97ನೇ ಸಾಲಿನಲ್ಲಿ ಅಂತಿಮ ವರ್ಷದ 41436 ವಿದ್ಯಾರ್ಥಿಗಳಲ್ಲಿ 22584 ವಿದ್ಯಾರ್ಥಿಗಳು ಮಾತ್ರ (ಶೇಕಡ54.50) ಪರೀಕ್ಷೆಗೆ ಹಾಜರಾಗಿದ್ದಾರೆ. ಇವರಲ್ಲಿ 13575 ವಿದ್ಯಾರ್ಥಿಗಳು